ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ
ದಿನಾಂಕ : DATE : 5/10/20

# ಪಾಲಿಕೆ ಚುನಾವಣೆ ವಿಳಂಬ ಸಾಧ್ಯತೆ

## 225ರಿಂದ 250ಕ್ಕೆ ವಾರ್ಡ್ ಹೆಚ್ಚಿಸಲು ರಾಜ್ಯಪತ್ರದಲ್ಲಿ ಅಧಿಸೂಚನೆ

5-10-2020

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಬಿಬಿಎಂಪಿ ವಾರ್ಡ್‌ಗಳನ್ನು ಕನಿಷ್ಠ 225ರಿಂದ ಗರಿಷ್ಠ 250ಕ್ಕೆ ಹೆಚ್ಚಿಸಲು ರಾಜ್ಯಪತ್ರದಲ್ಲಿ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಇದರಿಂದ ಚುನಾವಣೆ ವಿಳಂಬವಾಗುವ ಸಾಧ್ಯತೆಯಿದ್ದು, ಹೈಕೋರ್ಟ್ ವಿಚಾರಣೆ ವೇಳೆ ಸರ್ಕಾರ ಚುನಾವಣೆ ತಯಾರಿ ಬಗ್ಗೆ ಯಾವ ಉತ್ತರ ನೀಡಲಿದೆ ಎಂಬುದು ಕುತೂಹಲ ಕೆರಳಿಸಿದೆ.

ಬಿಬಿಎಂಪಿ ಕಾರ್ಪೋರೇಟರ್‌ಗಳ ಅಧಿಕಾರ ಪೂರ್ಣಗೊಂಡು ಈಗಾಗಲೇ 25 ದಿನಗಳಾಗಿವೆ. ಆದರೆ, 1976ರ ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ ಅನ್ವಯ 200 ವಾರ್ಡ್‌ಗಳಿಗೆ ಅವಕಾಶವಿದೆ ಎಂಬ ಪದ ಪ್ರಯೋಗ ಮಾಡಲಾಗಿತ್ತು. ಈಗ ಅದಕ್ಕೆ ಮೂರನೇ ತಿದ್ದುಪಡಿ ಮಾಡಲಾಗಿದ್ದು, 'ಕನಿಷ್ಠ 225ರಿಂದ ಗರಿಷ್ಠ 250 ವಾರ್ಡ್‌ಗಳು' ಎಂಬ ಪದ ಪ್ರಯೋಗಕ್ಕೆ ರಾಜ್ಯಪಾಲರ ಅಂಕಿತ ಸಿಕ್ಕಿದೆ. ಹೀಗಾಗಿ ವಾರ್ಡ್ ಹೆಚ್ಚಳದ ಕುರಿತು ಸರ್ಕಾರ ಶನಿವಾರ ರಾಜ್ಯಪತ್ರ ಹೊರಡಿಸಿದೆ.

» **ವಾರ್ಡ್ ಹೆಚ್ಚಳಕ್ಕೆ ಸರ್ಕಾರ ಅಸ್ತು**

**ವಿಧಾನಸಭಾ ಕ್ಷೇತ್ರ ಗಡಿ ಮೀರುವಂತಿಲ್ಲ:** ಅಧಿಸೂಚನೆ ಅನ್ವಯ, ವಿಶೇಷವಾಗಿ ಯಾವುದೇ ವಿಧಾನಸಭಾ ಕ್ಷೇತ್ರದ ಗಡಿ ಮತ್ತು ವಾರ್ಡ್‌ಗಳನ್ನು ಬದಲಾಯಿಸದೆ, ಅದೇ ವ್ಯಾಪ್ತಿಯಲ್ಲಿ ಮರುವಿಂಗಡಣೆ ಮಾಡಬೇಕು. ಜತೆಗೆ, ಈ ಬಗ್ಗೆ ಪರಿಶೀಲನೆ ಮಾಡಿ, ಶಿಫಾರಸು ಮಾಡಲು ಗಡಿ ನಿರ್ಧಾರ ಆಯೋಗ ರಚನೆ ಮಾಡುವಂತೆ ಸರ್ಕಾರ ನಿರ್ದೇಶನ ನೀಡಿದೆ.



### 241 ವಾರ್ಡ್‌ಗಳ ರಚನೆ ಅಂತಿಮ?

ಪಾಲಿಕೆ ಹೊರವಲಯದಲ್ಲಿ ಜನಸಂಖ್ಯೆ ವೃದ್ಧಿಯಾಗಿದೆ. ಆದ್ದರಿಂದ ಈ ಭಾಗದಲ್ಲಿ 30 ಹಾಗೂ ನಗರದ ಕೇಂದ್ರ ಭಾಗದಲ್ಲಿ 12 ವಾರ್ಡ್‌ಗಳನ್ನು ಹೆಚ್ಚಳ ಮಾಡುವ ಸಾಧ್ಯತೆಯಿದೆ. ಒಟ್ಟಾರೆ 241 ವಾರ್ಡ್‌ಗಳ ರಚನೆಯಾಗಲಿದೆ ಎಂದು ಮೂಲಗಳಿಂದ ತಿಳಿದುಬಂದಿದೆ.

### ಅ.12ರಂದು ನಡೆಯಲಿದೆ ವಿಚಾರಣೆ

ಸರ್ಕಾರ ಚುನಾವಣೆ ಮುಂದೂಡುವ ಉದ್ದೇಶದಿಂದ ಬಿಬಿಎಂಪಿಗೆ ಆಡಳಿತಾಧಿಕಾರಿ ನೇಮಕ ಮಾಡಿದೆ. ಹೀಗಾಗಿ, ನಿಗದಿತ ವೇಳೆಗೆ ಚುನಾವಣೆ ನಡೆಸಲು ಸರ್ಕಾರ ಮತ್ತು ಚುನಾವಣಾ ಆಯೋಗಕ್ಕೆ ನಿರ್ದೇಶಿಸಬೇಕು ಎಂದು ಆಗ್ರಹಿಸಿ ಕಾಂಗ್ರೆಸ್‌ನ ಮಾಜಿ ಕಾರ್ಪೋರೇಟರ್‌ಗಳು ನ್ಯಾಯಾಲಯಕ್ಕೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ. ಜತೆಗೆ, ಚುನಾವಣಾ ಆಯೋಗವು ಅ.19ಕ್ಕೆ ಮತದಾದರ ಕರಡು ಪಟ್ಟಿ ರಚಿಸಿ, ಅಂತಿಮ ಪಟ್ಟಿ ಸಿದ್ಧಪಡಿಸಬೇಕಿದೆ. ಈ ಬಗ್ಗೆ ಅ.12ರಂದು ನಡೆಯಲಿರುವ ಕೋರ್ಟ್ ವಿಚಾರಣೆಯಲ್ಲಿ ಸರ್ಕಾರ ಮತ್ತು ಚುನಾವಣಾ ಆಯೋಗ ಉತ್ತರ ನೀಡಲಿವೆ.

### ಸರ್ಕಾರದ ಉತ್ತರ ಏನಿರಬಹುದು?

» ಬಿಬಿಎಂಪಿ ವ್ಯಾಪ್ತಿಯಲ್ಲಿ ಜನಸಂಖ್ಯೆ ಹೆಚ್ಚಾಗಿದ್ದು ವಾರ್ಡ್ ಹೆಚ್ಚಳ ಅನಿವಾರ್ಯವಾಗಿದೆ.

» ವಾರ್ಡ್‌ಗಳನ್ನು ಹೆಚ್ಚಳಕ್ಕೆ ಅಧಿಸೂಚನೆ ಹೊರಡಿಸಲಾಗಿದ್ದು, ಚುನಾವಣೆಗೆ 3ರಿಂದ 6 ತಿಂಗಳು ಕಾಲಾವಕಾಶ ಬೇಕು.

» ವಾರ್ಡ್‌ಗಳ ಹೆಚ್ಚಳ ಪ್ರಕ್ರಿಯೆ ಆರಂಭಿಸಲು ನೆರೆಹಾವಳಿ ಮತ್ತು ಕರೊನಾ ಸೋಂಕು ಅಡ್ಡಿಯಾಗಿತ್ತು.

» ವಾರ್ಡ್ ಹೆಚ್ಚಳದ ನಂತರ ಪರಿಶೀಲನೆ ನಡೆಸಿ ಒಪ್ಪಿಗೆ ಸೂಚಿಸಲು ಗಡಿ ನಿರ್ಧಾರ ಸಮಿತಿ ರಚಿಸಿ ವರದಿಗೆ ಸಮಸಯ ಬೇಕು.

» ಒಂದು ವೇಳೆ ಹೈಕೋರ್ಟ್ ಸರ್ಕಾರದ ಯಾವುದೇ ಉತ್ತರಗಳಿಗೆ ಮಾನ್ಯ ಮಾಡದೆ ನಿಗದಿತ ಅವಧಿಯೊಳಗೆ ಚುನಾವಣೆ ನಡೆಸುವಂತೆ ಸೂಚಿಸಿದರೆ, ಶೀಘ್ರ ವಾರ್ಡ್ ಹೆಚ್ಚಳ ಮಾಡಿ ಚುನಾವಣೆ ನಡೆಸಲೂ ಕನಿಷ್ಠ 3 ತಿಂಗಳ ಸಮಯ ಕೇಳಬಹುದು.

### 198 ವಾರ್ಡ್‌ಗಳ ಚುನಾವಣೆ ನಡೆಸುವುದಕ್ಕೆ ಶೇ.70 ಸಿದ್ಧತೆ

ಬಿಬಿಎಂಪಿಯಲ್ಲಿ ಪ್ರಸ್ತುತ 198 ವಾರ್ಡ್ ಅಸ್ತಿತ್ವದಲ್ಲಿದ್ದು, ಈಗಾಗಲೇ ಚುನಾವಣೆ ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ ಎಂದು ತೋರಿಸಲು ಸರ್ಕಾರ ವಾರ್ಡ್‌ಗಳ ಮರುವಿಂಗಡಣೆ, ವಾರ್ಡ್‌ಗಳ ಮೀಸಲಾತಿ ಕರಡು ಪಟ್ಟಿಯನ್ನು ರಚಿಸಿದೆ. ಅಂತಿಮ ಪಟ್ಟಿ ಹೊರಬರುವುದು ಬಾಕಿಯಿದೆ. ಪ್ರಸ್ತುತ ಇರುವ ವಾರ್ಡ್‌ಗಳಿಗೆ ಚುನಾವಣೆ ನಡೆಸಲು ಶೇ.70 ಸಿದ್ಧತೆ ಪೂರ್ಣಗೊಂಡಿದೆ. ಆದರೆ ಈಗ ಸರ್ಕಾರ ವಾರ್ಡ್ ಹೆಚ್ಚಳದ ಕುರಿತು ಅಧಿಸೂಚನೆ ಹೊರಡಿಸಿದ್ದು, ವಾರ್ಡ್ ಹೆಚ್ಚಳಕ್ಕೆ ಸಿದ್ಧತೆ ಮಾಡಿಕೊಂಡಿದೆ.

### ಬಿಬಿಎಂಪಿ ವಿಧೇಯಕ ಮತ್ತಷ್ಟು ವಿಳಂಬವಾಗುವ ಸಾಧ್ಯತೆ

ನಗರದ ಸಮಗ್ರ ಅಭಿವೃದ್ಧಿಗೆ ಶಾಸಕ ಅಧ್ಯಕ್ಷ ಎಸ್. ರಘು ನೇತೃತ್ವದ ವಿಧಾನಮಂಡಲ ಜಂಟಿ ಸಲಹಾ ಸಮಿತಿಯು ಬಿಬಿಎಂಪಿ ವಿಧೇಯಕ-2020 ಸಿದ್ಧಪಡಿಸುತ್ತಿದೆ. ಇದರಲ್ಲಿ ವಲಯಗಳ ಹೆಚ್ಚಳ, ಹೆಚ್ಚುವರಿಯಾಗಿ ಐಎಎಸ್ ಅಧಿಕಾರಿಗಳ ನೇಮಕ ಹಾಗೂ ಮೇಯರ್ ಆಡಳಿತಾವಧಿ ಎರಡೂವರೆ ವರ್ಷಗಳಿಗೆ ಏರಿಕೆ ಸೇರಿ ವಿವಿಧ ಅಂಶಗಳು ಸೇರ್ಪಡೆಯಾಗುವ ಸಾಧ್ಯತೆಗಳಿವೆ. ಆದರೆ, ವರದಿ ಸಲ್ಲಿಕೆಗೆ ನವೆಂಬರ್ ಅಂತ್ಯದವರೆಗೂ ಸಮಯ ನೀಡಲಾಗಿದೆ. ಇದಕ್ಕೂ ಮೊದಲೇ ಚುನಾವಣೆ ನಡೆಸುವಂತೆ ಹೈಕೋರ್ಟ್ ಆದೇಶ ಹೊರಡಿಸಿದರೂ ವಾರ್ಡ್ ಹೆಚ್ಚಳಕ್ಕೆ ಸರ್ಕಾರ ವೇದಿಕೆ ರೂಪಿಸಿಕೊಂಡಿದೆ.